ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
**Bangalore Development Authority**

ಸಂಖ್ಯೆ : ಬೆಂಅಪ್ರಾ/ನಯೋಸ/DLP-12/2075/2024-25
No.
E Office No. 77273

ದಿನಾಂಕ :
Date : 25/11/2024

## ಕಾರ್ಯಾದೇಶ

ವಿಷಯ: ಅನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ತಿರುಪಾಳ್ಯ ಗ್ರಾಮದ ಸರ್ವೆ ನಂ.30/24ಬಿ ರಲ್ಲಿನ 1ಎ-33ಗುಂ(ಖರಾಬು 0ಎ-06ಗುಂ ಹೊರತುಪಡಿಸಿ), ಸರ್ವೆ ನಂ. 30/24ಸಿ ರಲ್ಲಿನ 1ಎ-35ಗುಂ, ಸರ್ವೆ ನಂ. 30/25ಎ1 ರಲ್ಲಿನ 0ಎ-08ಗುಂ, ಸರ್ವೆ ನಂ. 30/25ಬಿ ರಲ್ಲಿನ 1ಎ-39ಗುಂ ಒಟ್ಟು 5ಎ-35ಗುಂ(ಖರಾಬು 0ಎ-06ಗುಂ ಹೊರತುಪಡಿಸಿ)ವಿಸ್ತೀರ್ಣದ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ(15) & (17) ರ ಅಡಿಯಲ್ಲಿ ವಸತಿ ಅಭಿವೃದ್ಧಿ ಯೋಜನೆ ನಕ್ಷೆಯನ್ನು ಅರ್ಜಿದಾರರಾದ M/s Prestige Estates Projects Ltd ರವರ ಪರವಾಗಿ ಅನುಮೋದಿಸುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ಅರ್ಜಿ ದಿನಾಂಕ 15.06.2024
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 4.4.10/ 2024, ದಿನಾಂಕ 18.07.2024
3. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/DLP-12/1165/2024-25, ದಿನಾಂಕ 23.08.2024.
4. ತಹಶೀಲ್ದಾರ್ ರವರಿಗೆ ಬರೆದ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/ DLP-12/1165/2024-25, ದಿನಾಂಕ 26.08.2024.
5. ಅರ್ಜಿದಾರರು ಶುಲ್ಕ ಪಾವತಿಸಿ ಚಲನ್ ಸಲ್ಲಿಸಿರುವ ದಿನಾಂಕ 05.09.2024.
6. ಈ ಕಛೇರಿಯ ಅ.ಟಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/DLP-12/1437/ 2024-25, ದಿನಾಂಕ 20.09.2024.
7. ಅಧಿಕ ಜಿಲ್ಲಾ ನೊಂದಣಾಧಿಕಾರಿಗಳು, ಯೂನಿಟ್-1, ಬೆಂಗಳೂರು ನಗರ ಜಿಲ್ಲೆ ರವರ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ನಂಬರ್ BDA-1-02123-2024-25 ದಿನಾಂಕ 14.10.2024 ರಂತೆ ನೊಂದಾಯಿಸಿರುವ ಪರಿತ್ಯಾಜನ ಪತ್ರ.

******

ಅನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ತಿರುಪಾಳ್ಯ ಗ್ರಾಮದ ಸರ್ವೆ ನಂ.30/24ಬಿ ರಲ್ಲಿನ 1ಎ-33ಗುಂ(ಖರಾಬು 0ಎ-06ಗುಂ ಹೊರತುಪಡಿಸಿ), ಸರ್ವೆ ನಂ. 30/24ಸಿ ರಲ್ಲಿನ 1ಎ-35ಗುಂ, ಸರ್ವೆ ನಂ. 30/25ಎ1 ರಲ್ಲಿನ 0ಎ-08ಗುಂ, ಸರ್ವೆ ನಂ.30/25ಬಿ ರಲ್ಲಿನ 1ಎ-39ಗುಂ ಒಟ್ಟು 5ಎ-35ಗುಂ(ಖರಾಬು 0ಎ-06ಗುಂ ಹೊರತುಪಡಿಸಿ)ವಿಸ್ತೀರ್ಣದ ಜಮೀನುಗಳನ್ನು ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡುವಂತೆ ಉಲ್ಲೇಖ [1] ರಲ್ಲಿ M/s Prestige Estates Projects Ltd ರವರು ಕೋರಿರುತ್ತಾರೆ.

ವಿಷಯ: ಅನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ತಿರುಪಾಳ್ಯ ಗ್ರಾಮದ ಸರ್ವೆ ನಂ.30/24ಬಿ ರಲ್ಲಿನ 1ಎ-33ಗುಂ(ಖರಾಬು 0ಎ-06ಗುಂ ಹೊರತುಪಡಿಸಿ), ಸರ್ವೆ ನಂ. 30/24ಸಿ ರಲ್ಲಿನ 1ಎ-35ಗುಂ, ಸರ್ವೆ ನಂ. 30/25ಎ1 ರಲ್ಲಿನ 0ಎ-08ಗುಂ, ಸರ್ವೆ ನಂ. 30/25ಬಿ ರಲ್ಲಿನ 1ಎ-39ಗುಂ ಒಟ್ಟು 5ಎ-35ಗುಂ(ಖರಾಬು 0ಎ-06ಗುಂ ಹೊರತುಪಡಿಸಿ)ವಿಸ್ತೀರ್ಣದ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ(15) & (17) ರ ಅಡಿಯಲ್ಲಿ ವಸತಿ ಅಭಿವೃದ್ಧಿ ಯೋಜನೆ ನಕ್ಷೆಯನ್ನು ಅರ್ಜಿದಾರರಾದ M/s Prestige Estates Projects Ltd ರವರ ಪರವಾಗಿ ಅನುಮೋದಿಸುವ ಬಗ್ಗೆ.

---

ವಿಷಯವನ್ನು ಉಲ್ಲೇಖ [2] ರಂತೆ ದಿನಾಂಕ 18.07.2024 ರಂದು ನಡೆದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ 4.4.10/2024 ರಲ್ಲಿ ಮಂಡಿಸಿ ಚರ್ಚಿಸಲಾಗಿರುತ್ತದೆ. ಚರ್ಚೆಯ ನಂತರ "ಸಲ್ಲಿಸಿರುವ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯು ಅನುಮೋದಿತ ಮಹಾಯೋಜನೆ RMP-2015 ರ ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುವುದನ್ನು ಸಭೆಯು ಗಮನಿಸಿತು. ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ತಿರುಪಾಳ್ಯ ಗ್ರಾಮದ ಸ.ನಂ.30/24ಬಿ ರಲ್ಲಿ 1ಎ-33ಗುಂ, ಸ.ನಂ.30/24ಸಿ ರಲ್ಲಿ 1ಎ-35ಗುಂ, ಸ.ನಂ.30/25ಎ1 ರಲ್ಲಿ 0ಎ-08ಗುಂ, ಸ.ನಂ.30/25ಬಿ ರಲ್ಲಿ 1ಎ-39ಗುಂ, ಒಟ್ಟು 5ಎ-35ಗುಂ (0ಎ-06ಗುಂ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಕೆಲವೊಂದು ಷರತ್ತುಗಳಿಗೊಳಪಡಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ (15) & (17) ರ ಅಡಿಯಲ್ಲಿ ಅನುಮೋದಿಸಲು ತೀರ್ಮಾನಿಸಲಾಯಿತು. ಈ ಕುರಿತು ನಿಯಮಾನುಸಾರ ಮುಂದಿನ ಕ್ರಮವಹಿಸುವ ಅಧಿಕಾರವನ್ನು ಆಯುಕ್ತರು ರವರಿಗೆ ಪ್ರತ್ಯಾಯೋಜಿಸಲು ನಿರ್ಣಯಿಸಲಾಯಿತು."

ವಸತಿ ಅಭಿವೃದ್ಧಿ ಯೋಜನೆ ನಕ್ಷೆ ಅನುಮೋದನೆ ಸಂಬಂಧ ಅರ್ಜಿದಾರರಿಗೆ ವಿವಿಧ ಶುಲ್ಕಗಳ ಬಾಬ್ತು ₹ 29,34,240/- [₹ ಇಪ್ಪತ್ತೊಂಭತ್ತು ಲಕ್ಷದ ಮೂವತ್ತನಾಲ್ಕು ಸಾವಿರದ ಇನ್ನೂರ ನಲವತ್ತು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸುವಂತೆ ಉಲ್ಲೇಖ [3] ರಲ್ಲಿ ತಿಳಿಸಲಾಗಿತ್ತು. ಉಲ್ಲೇಖ [4] ರ ಪತ್ರದಲ್ಲಿ ಪ್ರಸ್ತಾಪಿತ ಸರ್ವೆ ನಂಬರ್ ಜಮೀನುಗಳ ಕುರಿತು ಯಾವುದೇ ವ್ಯಾಜ್ಯ / ಪ್ರಕರಣ / ತಕರಾರುಗಳು ಇದ್ದಲ್ಲಿ 15 ದಿನಗಳೊಳಗಾಗಿ ಈ ಕಛೇರಿಗೆ ಮಾಹಿತಿ ನೀಡುವಂತೆ ಕೋರುತ್ತಾ, ಇಲ್ಲವಾದಲ್ಲಿ ಯಾವುದೇ ವ್ಯಾಜ್ಯ / ಪ್ರಕರಣ ತಕರಾರುಗಳು ಇರುವುದಿಲ್ಲವೆಂದು ಬಾವಿಸಿ ಮುಂದಿನ ಕ್ರಮವಹಿಸಲಾಗುವುದೆಂದು ತಹಶೀಲ್ದಾರ್, ಆನೇಕಲ್ ತಾಲ್ಲೂಕು ರವರಿಗೆ ಪತ್ರ ಬರೆಯಲಾಗಿರುತ್ತದೆ.

ಅರ್ಜಿದಾರರು ದಿನಾಂಕ 05.09.2024 ರಂದು ಶುಲ್ಕ ಮೊತ್ತ ₹ 29,34,240/- [₹ ಇಪ್ಪತ್ತೊಂಭತ್ತು ಲಕ್ಷದ ಮೂವತ್ತನಾಲ್ಕು ಸಾವಿರದ ಇನ್ನೂರ ನಲವತ್ತು ಮಾತ್ರ] ಗಳನ್ನು ಕೆನರಾ ಬ್ಯಾಂಕ್ ಶಾಖೆಯಲ್ಲಿ ಪಾವತಿಸಿ ಚಲನ್ ನಂ. GN24094709 ನ್ನು ಉಲ್ಲೇಖ [5] ರ ಪತ್ರದಲ್ಲಿ ಅಡಕಗೊಳಿಸಿ ಸಲ್ಲಿಸಿರುತ್ತಾರೆ. ಸದರಿ ಮೊತ್ತವು ಪ್ರಾಧಿಕಾರದ ಖಾತೆಗೆ ಜಮೆ ಆಗಿರುವ ಬಗ್ಗೆ ಪ್ರಾಧಿಕಾರದ ಆರ್ಥಿಕ ಸದಸ್ಯರ ವಿಭಾಗದಿಂದ ದಿನಾಂಕ 09.09.2024 ರ ಅನೌಪಚಾರಿಕ ಟಿಪ್ಪಣಿಯೊಂದಿಗೆ ದಿನಾಂಕ 05.09.2024 ರಂದು ನೀಡಿರುವ ಬ್ಯಾಂಕ್ ಸ್ಟೇಟ್ ನೊಂದಿಗೆ ಪರಿಶೀಲಿಸಿಕೊಂಡು ಜಮಾ ಆಗಿರುವ ಕುರಿತು ಖಚಿತಪಡಿಸಿಕೊಳ್ಳಲಾಗಿದೆ.

ಉಲ್ಲೇಖ [6] ರಲ್ಲಿ ಕರಡು ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಉದ್ಯಾನವನ ಹಾಗೂ ರಸ್ತೆ ವಿಸ್ತರಣೆಗಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು ಪುಕ್ಕಟೆಯಾಗಿ ಪ್ರಾಧಿಕಾರಕ್ಕೆ ನೊಂದಾಯಿತ ಪರಿತ್ಯಾಜನಾ (Relinquishment Deed) ಪತ್ರದ ಮೂಲಕ ಹಸ್ತಾಂತರಿಸುವಂತೆ ಅರ್ಜಿದಾರರಿಗೆ ಪತ್ರ ಹಾಗೂ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಪ್ರಸ್ತಾಪಿಸಿರುವ ಉದ್ಯಾನವನ ಹಾಗೂ ರಸ್ತೆ ವಿಸ್ತರಣೆಗಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು

ಪ್ರಾಧಿಕಾರಕ್ಕೆ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳುವಂತೆ ಕಾರ್ಯಪಾಲಕ ಅಭಿಯಂತರರು, [ದಕ್ಷಿಣ ವಿಭಾಗ] ರವರಿಗೆ ಅನೌಪಚಾರಿಕ ಟಿಪ್ಪಣಿಗಳ ಮೂಲಕ ತಿಳಿಸಲಾಗಿತ್ತು.

ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಉದ್ಯಾನವನ ಮತ್ತು ಬಯಲು ಜಾಗ ಮತ್ತು ರಸ್ತೆ ಅಗಲೀಕರಣ ಪ್ರದೇಶಗಳನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ದಿನಾಂಕ 14.10.2024 ರಂದು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡಿರುವುದಾಗಿ ಕಾರ್ಯಪಾಲಕ ಅಭಿಯಂತರರು [ದಕ್ಷಿಣ ವಿಭಾಗ] ದಿನಾಂಕ 16.10.2024 ರಂದು ವರದಿ ನೀಡಿರುತ್ತಾರೆ.

ಉಲ್ಲೇಖ [4] ರಲ್ಲಿ ತಹಶೀಲ್ದಾರ್ ರವರಿಗೆ ಬರೆದ ಪತ್ರಕ್ಕೆ ಸಂಬಂಧಿಸಿದಂತೆ, ಸದರಿಯವರಿಂದ ನಿಗದಿತ ಅವಧಿಯಲ್ಲಿ ಯಾವುದೇ ಮಾಹಿತಿ / ವರದಿ ಸ್ವೀಕೃತವಾಗಿಲ್ಲದಿರುವುದರಿಂದ ಪ್ರಸ್ತಾವನೆಯಲ್ಲಿನ ಜಮೀನಿನ ಬಗ್ಗೆ ಯಾವುದೇ ವ್ಯಾಜ್ಯ / ಪ್ರಕರಣ ತಕರಾರುಗಳು ಇರುವುದಿಲ್ಲವೆಂದು ಪರಿಗಣಿಸಿ ಪ್ರಸ್ತಾವನೆಯನ್ನು ಮುಂದುವರೆಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಅನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ತಿರುಪಾಳ್ಯ ಗ್ರಾಮದ ಸರ್ವೆ ನಂ.30/24ಬಿ ರಲ್ಲಿನ 1ಎ-33ಗುಂ(ಖರಾಬು 0ಎ-06ಗುಂ ಹೊರತುಪಡಿಸಿ), ಸರ್ವೆ ನಂ. 30/24ಸಿ ರಲ್ಲಿನ 1ಎ-35ಗುಂ, ಸರ್ವೆ ನಂ. 30/25ಎ1 ರಲ್ಲಿನ 0ಎ-08ಗುಂ, ಸರ್ವೆ ನಂ. 30/25ಬಿ ರಲ್ಲಿನ 1ಎ-39ಗುಂ ಒಟ್ಟು 5ಎ-35ಗುಂ(ಖರಾಬು 0ಎ-06ಗುಂ ಹೊರತುಪಡಿಸಿ)ವಿಸ್ತೀರ್ಣದ ಜಮೀನುಗಳನ್ನು ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಅನುಮೋದನೆ ನೀಡಲಾಗಿದೆ.

| | |
|---|---|
| 1 | ರೇರಾ ಅಧಿನಿಯಮ 2016 ಹಾಗೂ ಸಂಬಂಧಿತ ನಿಯಮಗಳು 2017 ರನ್ವಯ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೊಂದಣಿ ಮಾಡಿಸುವುದು. |
| 2 | ಪ್ರಶ್ನಿತ ಜಮೀನುಗಳಲ್ಲಿ ಹಾಲಿ ಇರುವ ಅಧಿಕ ಶಕ್ತಿ ವಿದ್ಯುತ್ ಮಾರ್ಗ ಸ್ಥಳಾಂತರಿಸಲು ಮುಖ್ಯ ಇಂಜಿನಿಯರ್ (ವಿದ್ಯುತ್) Transmission KPTCL ರವರು ಅನುಮೋದಿಸಿದ್ದು, ಸ್ಥಳಾಂತರಗೊಂಡ ನಂತರ ಕಟ್ಟಡ ನಕ್ಷೆಗಳನ್ನು ಅನುಮತಿಸತಕ್ಕದ್ದು. |
| 3 | ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವುದು. |
| 4 | ವಿವರವಾದ ಕಟ್ಟಡ ನಕ್ಷೆಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳುವುದು. |
| 5 | ಪ್ರಾಧಿಕಾರವು ಅನುಮೋದಿಸಿರುವ ಅಭಿವೃದ್ಧಿ ಯೋಜನಾ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ. |
| 6 | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶವು ಸೇರಿದಂತೆ ಅಭಿವೃದ್ಧಿ ಯೋಜನಾ ಪ್ರದೇಶದಲ್ಲಿ 240.00 ಚ.ಮೀ FAR ಪ್ರದೇಶಕ್ಕೆ ಒಂದು ಮರದಂತೆ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು. |

| | |
|---|---|
| 7 | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸುವ ಪ್ರದೇಶದಲ್ಲಿ ಹಾಗೂ Buffer ಪ್ರದೇಶದಲ್ಲಿ ವಿವಿದ ಜಾತಿಯ ಮರಗಿಡಗಳನ್ನು ಬೆಳಸಿ ಅಭಿವೃದ್ಧಿ ಪಡಿಸುವುದು. ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. |
| 8 | ಸದರಿ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ಸಂಚಾರ ವ್ಯವಸ್ಥೆಯಲ್ಲಿ ಅಡಚಣೆ ಉಂಟಾಗದಂತೆ ವ್ಯವಸ್ಥೆ ಕಲ್ಪಿಸುವುದು. ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಅಳವಡಿಸಿದಲ್ಲಿ ಸ್ವತ್ತಿನ ಒಳಭಾಗದಲ್ಲಿ ನಿರ್ವಹಿಸುವುದು. |
| 9 | ಸ್ವಾಭಾವಿಕವಾಗಿ ಇಳಿಜಾರು ಕಡೆ ಹೋಗುವ ಮಳೆ ನೀರನ್ನು ಡ್ರೈನ್ ಮುಖಾಂತರ ವ್ಯಾಲಿಗೆ ತಂದು ಸೇರಿಸುವುದು ಹಾಗೂ ನೀರು ಸರಾಗವಾಗಿ ಹರಿಯಲು ಸೂಕ್ತ ವ್ಯವಸ್ತೆ ಮಾಡುವುದು. |
| 10 | ವಿವರವಾದ ಕಟ್ಟಡ ನಕ್ಷೆಗಳನ್ನು ಅನುಮೋದಿಸುವ ಸಕ್ಷಮ ಪ್ರಾಧಿಕಾರವು Structural Stability ಬಗ್ಗೆ ಹಾಗೂ ವಿವಿಧ ಇಲಾಖೆಗಳು ನೀಡುವ NOC ಗಳಲ್ಲಿನ ಷರತ್ತುಗಳೊಂದಿಗೆ ಪರಿಶೀಲಿಸಿಕೊಳ್ಳತಕ್ಕದ್ದು. |
| 11 | ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿ ಅಗತ್ಯತೆ ಬಗ್ಗೆ Water Table ನ ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು. |
| 12 | ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |
| 13 | ದಿನಾಂಕ: 16/1/2010 ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಹಾಗೂ ದಿನಾಂಕ: 07/01/2011 ರಂದು ಜರುಗಿದ ಸಮಿತಿ ಸಭೆಯ ವಿಷಯ ಸಂಖ್ಯೆ:09/2011ರ ತೀರ್ಮಾನದಂತೆ ಅಭಿವೃದ್ಧಿನಕ್ಷೆಯಲ್ಲಿ Arrangement of Blocks ಗಳನ್ನು ವಲಯನಿಯಮಾವಳಿಗಳಂತೆ ಪರಿಶೀಲಿಸಲಾಗಿದ್ದು, ಕಟ್ಟಡ ನಕ್ಷೆಗೆ ಸಂಬಂಧಿಸಿದ ಇತರೆ ವಿವರಗಳನ್ನು ಪರಿಶೀಲಿಸುವುದಿಲ್ಲ. ಇದನ್ನು ಕಟ್ಟಡನಕ್ಷೆ ಅನುಮೋದಿಸುವ ಸಕ್ಷಮ ಪ್ರಾಧಿಕಾರವು ವಿವಿಧ ಇಲಾಖೆಗಳಿಂದ NOC ಗಳನ್ನು ಮತ್ತು ಇನ್ನಿತರೇ ಅರ್ಜಿದಾರರಿಂದ ಪಡೆದು ನಿಯಮಾನುಸಾರ ಪರಿಶೀಲಿಸಿಕೊಳ್ಳತಕ್ಕದ್ದು. |
| 14 | ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲೀಕತ್ವದ ಬಗ್ಗೆ ಅರ್ಜಿದಾರರು ತಪ್ಪು ಮಾಹಿತಿ / ದಾಖಲಾತಿ ನೀಡಿ ಅನುಮೋದನೆ ಪಡೆದಿದ್ದು ದೃಢಪಟ್ಟಲ್ಲಿ ಮತ್ತು ಮಾಲೀಕತ್ವದ ಬಗ್ಗೆ ನ್ಯಾಯಾಲಯದಲ್ಲಿ ತಕರಾರು ಉದ್ಭವವಾದಲ್ಲಿ ಅಭಿವೃದ್ಧಿ ಯೋಜನಾ ನಕ್ಷೆಯ ಅನುಮೋದನೆಯನ್ನು ರದ್ದುಗೊಳಿಸುವ ಅಥವಾ ಹಿಂಪಡೆಯುವ ಅಧಿಕಾರವನ್ನು ಕೆಟಿಸಿಪಿ ಕಾಯ್ದೆ ಕಲಂ 76(O) ರಡಿಯಲ್ಲಿ ಪ್ರಾಧಿಕಾರದ ಆಯುಕ್ತರು ಅಧಿಕಾರ ಹೊಂದಿದ್ದು, ಅದರಂತೆ ಕ್ರಮ ಜರುಗಿಸಲಾಗುವುದು |

| | |
|---|---|
| 15 | ಅಭಿವೃದ್ಧಿ ನಕ್ಷೆಯಲ್ಲಿ Sewage Treatment Plant, Solid Waste Management, RWH, Transformer Yard ಗೆ ಅಗತ್ಯ ಜಾಗಗಳನ್ನು ಗುರುತಿಸಿ ಅಭಿವೃದ್ಧಿಪಡಿಸುವುದು. ಕುಡಿಯುವ ನೀರು ಮತ್ತು ಇತರೆ ಉಪಯೋಗದ ನೀರು ಸರಬರಾಜುಗಾಗಿ Dual Piping System ಅನ್ನು ಅಳವಡಿಸುವುದು. ಕಟ್ಟಡ ನಿರ್ಮಾಣಕ್ಕೆ ಸಂಸ್ಕರಿತ ನೀರನ್ನು ಉಪಯೋಗಿಸತಕ್ಕದ್ದು. |
| 16 | ಪ್ರಸ್ತಾಪಿತ ಜಮೀನನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಅರ್ಜಿದಾರರು ಕಡ್ಡಾಯವಾಗಿ ಮಳೆನೀರು ಕೋಯ್ಲಿಗೆ ಸಂಬಂದಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಯಾವುದೇ ರೀತಿಯ ಮಳೆ ನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ದಪಡಿಸಿ ಪೂರ್ಣ ವಿವರಗಳನ್ನು ಅಭಿವೃದ್ಧಿ ನಕ್ಷೆಯಲ್ಲಿ ಗುರುತಿಸಿ ಕಟ್ಟಡ ನಕ್ಷೆ ಅನುಮೋದಿಸುವ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು. |
| 17 | ಪ್ರಸ್ತಾಪಿತ ಜಮೀನನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಭೂಮಿಯ ಒಳಗಡೆ ಎಲೆಕ್ಟ್ರಿಕ್ ಕೇಬಲ್ ಗಳನ್ನು ಅಳವಡಿಸತಕ್ಕದ್ದು. |
| 18 | ಕುಡಿಯುವ ನೀರು ಹಾಗೂ ತ್ಯಾಜ್ಯ ನೀರು ವಿಲೇವಾರಿಗಾಗಿ Sewage Treatment Plant ಸಹಿತ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. |
| 19 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ದರಾಗಿರುವುದು. |
| 20 | ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ (EWS) ಮತ್ತು ಕಡಿಮೆ ವರ್ಗದವರಿಗಾಗಿ (LIG) ವಸತಿ ಅಭಿವೃದ್ಧಿ ಯೋಜನೆಯಲ್ಲಿ ಪ್ರಾಧಿಕಾರದ ದಿನಾಂಕ.08/11/2010 ರ ಸುತ್ತೋಲೆಯಂತೆ ಒಟ್ಟು ವಸತಿ ಘಟಕಗಳ ಶೇ.10 ರಷ್ಟು ವಸತಿ ಘಟಕಗಳನ್ನು (EWS) ಆರ್ಥಿಕ ದುರ್ಬಲ ವರ್ಗದವರಿಗಾಗಿ ಮತ್ತು (LIG) ಕಡಿಮೆ ಆದಾಯ ವರ್ಗದವರಿಗಾಗಿ ಕಾಯ್ದಿರಿಸಿ, ಅದೇ ಉದ್ದೇಶಕ್ಕೆ ಬಳಸತಕ್ಕದ್ದು. |
| 21 | ಕಟ್ಟಡ ನಕ್ಷೆ ಅನುಮೋದನೆ ನೀಡುವ ಪ್ರಾಧಿಕಾರವು Fire, AAI, BSNL, BESCOM & KSPCB ಗಳಿಂದ NOC ಪಡೆದು ನಿಯಮಾನುಸಾರ ಪರಿಶೀಲಿಸಿಕೊಳ್ಳುವುದು. |
| 22 | ಪ್ರಶ್ನಿತ ಪ್ರದೇಶದ ಉದ್ದೇಶಿತ ಬೆಳವಣಿಗೆಗಳಿಂದ ಯಾವುದೇ ತ್ಯಾಜ್ಯ ನೀರನ್ನು ಸಂಸ್ಕರಿಸದೇ ಹೊರಬಿಡಬಾರದು. |
| 25 | ಪ್ರಶ್ನಿತ ಪ್ರದೇಶದಲ್ಲಿ ನೈಸರ್ಗಿಕವಾಗಿ ಅಥವಾ R.S ನಕ್ಷೆ ಅಥವಾ RMP ರಂತೆ ಹಾದು ಹೋಗುವ ಹಳ್ಳ ಮತ್ತು ಕೊಳ್ಳಗಳನ್ನು ಹಾಗೂ ಬಂಡಿದಾರಿ, ಕಾಲುದಾರಿಗಳನ್ನು ಒತ್ತುವರಿ ಮಾಡಬಾರದು. ನೀರಿನ ಹರಿವಿಕೆಗೆ ಅಡಚಣೆ ಉಂಟು ಮಾಡದೇ ಸರಗವಾಗಿ ನೀರು ಹರಿದು ಹೋಗುವಂತೆ ಅಭಿವೃದ್ಧಿಪಡಿಸತಕ್ಕದ್ದು. |
| 26 | ಪ್ರಾಧಿಕಾರವು ವಿಧಿಸುವ ಇತರೆ ಷರತ್ತುಗಳಿಗೆ ಬದ್ದರಾಗಿರುವುದು. |

ವಿಷಯ: ಅನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ತಿರುಪಾಳ್ಯ ಗ್ರಾಮದ ಸರ್ವೆ ನಂ.30/24ಬಿ ರಲ್ಲಿನ 1ಎ-33ಗುಂ(ಖರಾಬು 0ಎ-06ಗುಂ ಹೊರತುಪಡಿಸಿ), ಸರ್ವೆ ನಂ. 30/24ಸಿ ರಲ್ಲಿನ 1ಎ-35ಗುಂ, ಸರ್ವೆ ನಂ. 30/25ಎ1 ರಲ್ಲಿನ 0ಎ-08ಗುಂ, ಸರ್ವೆ ನಂ. 30/25ಬಿ ರಲ್ಲಿನ 1ಎ-39ಗುಂ ಒಟ್ಟು 5ಎ-35ಗುಂ(ಖರಾಬು 0ಎ-06ಗುಂ ಹೊರತುಪಡಿಸಿ)ವಿಸ್ತೀರ್ಣದ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ(15) & (17) ರ ಅಡಿಯಲ್ಲಿ ವಸತಿ ಅಭಿವೃದ್ಧಿ ಯೋಜನೆ ನಕ್ಷೆಯನ್ನು ಅರ್ಜಿದಾರರಾದ M/s Prestige Estates Projects Ltd ರವರ ಪರವಾಗಿ ಅನುಮೋದಿಸುವ ಬಗ್ಗೆ.

---

ಮೇಲ್ಕಂಡ ಷರತ್ತುಗಳೊಂದಿಗೆ, ಅನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ತಿರುಪಾಳ್ಯ ಗ್ರಾಮದ ಸರ್ವೆ ನಂ.30/24ಬಿ ರಲ್ಲಿನ 1ಎ-33ಗುಂ(ಖರಾಬು 0ಎ-06ಗುಂ ಹೊರತುಪಡಿಸಿ), ಸರ್ವೆ ನಂ. 30/24ಸಿ ರಲ್ಲಿನ 1ಎ-35ಗುಂ, ಸರ್ವೆ ನಂ. 30/25ಎ1 ರಲ್ಲಿನ 0ಎ-08ಗುಂ, ಸರ್ವೆ ನಂ. 30/25ಬಿ ರಲ್ಲಿನ 1ಎ-39ಗುಂ ಒಟ್ಟು 5ಎ-35ಗುಂ(ಖರಾಬು 0ಎ-06ಗುಂ ಹೊರತುಪಡಿಸಿ)ವಿಸ್ತೀರ್ಣದ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ (15) & (17) ರ ಅಡಿಯಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲಾಗಿದೆ.

**ಅಡಕ:** ಅಭಿವೃದ್ಧಿ ಯೋಜನಾ ನಕ್ಷೆ

ಆಯುಕ್ತರು,
ಬೆಂಅಪ್ರಾ, ಬೆಂಗಳೂರು.

ಇವರಿಗೆ,

M/s Prestige Estates Projects Ltd
No. 19, Falcon Tower,
Burnton Road,
Bangalore-560 025

Housiey.com